# ಪ್ರೇಮಿಗಳ ಕಲರವ



‘ಪ್ರೇಮಿಗಳ ದಿನ’ಕ್ಕೆ ಮುನ್ನುಡಿಯ ರೂಪದಲ್ಲಿ ‘ನಾನು ಲವ್ವರ್ ಆಫ್ ಜಾನು’ ಸಿನಿಮಾ ತೆರೆ ಕಾಣುತ್ತಿದೆ (ಫೆ. 9). ಹೊಸ ಪ್ರತಿಭೆಗಳ ಕಲರವದ ಈ ಸಿನಿಮಾದ ಕ್ರೈಮ್ ಮತ್ತು ಲವ್‌ಗಳ ಹದವಾದ ಮಿಶ್ರಣವಂತೆ.

ನಮ್ಮ ಸಿನಿಮಾ ಪ್ರೀತಿ ಮತ್ತು ಕ್ರಾಂತಿಯ ನಡುವಣ ಸಂಘರ್ಷ ಎನ್ನುವುದು ಚಿತ್ರದ ಬಗ್ಗೆ ನಿರ್ದೇಶಕ ಜಿ. ಸುರೇಶ್ ಅವರ ಬಣ್ಣನೆ. ಪ್ರೇಮಿಗಳ ತವಕ ತಲ್ಲಣಗಳ ಜೊತೆಗೆ ಸಾಮಾಜಿಕ ಕಾಳಜಿಯೂ ಚಿತ್ರಕಥೆಯಲ್ಲಿದೆಯಂತೆ. ನಿರ್ದೇಶಕರಾಗಿ ಸುರೇಶ್ ಅವರಿಗಿದು ಚೊಚ್ಚಿಲ ಸಿನಿಮಾ. ಈ ಮುನ್ನ ‘ಗೊಂಬೆಗಳ ಲವ್’ ಹಾಗೂ ‘ದಾದಾ ಈಸ್ ಬ್ಯಾಕ್’ ಚಿತ್ರಗಳಲ್ಲಿ ಸಹಾಯಕರಾಗಿ ದುಡಿದಿರುವ ಅವರು, ಇದೀಗ ನಿರ್ದೇಶನದೊಂದಿಗೆ ಪ್ರೇಮ ಮತ್ತು ಸಂಘರ್ಷಕ್ಕಿಳಿದಿದ್ದಾರೆ.

ವಿಶಾಲ್ ಹಾಗೂ ಮಂಜುಳಾ ಗಂಗಪ್ಪ ಚಿತ್ರದ ನಾಯಕ–ನಾಯಕಿ. ವಿಶಾಲ್ ಚಿತ್ರರಂಗದಲ್ಲಿ ನೆಲೆ ಕಂಡುಕೊಳ್ಳಲು ಕಳೆದ ಹತ್ತು ವರ್ಷಗಳಿಂದ ಹೆಣಗುತ್ತಿದ್ದಾರೆ. ಕೆಲವು ಚಿತ್ರಗಳಲ್ಲಿ ಪೋಷಕ ನಟರಾಗಿ ನಟಿಸಿರುವ ಹಾಗೂ ಕಿರುತೆರೆಯ ಧಾರಾವಾಹಿಯಲ್ಲಿ ಕಾಣಿಸಿಕೊಂಡಿರುವ ಅನುಭವ ಅವರಿಗಿದೆ. ಇದೆಲ್ಲ ಅನುಭವ ‘ನಾನು ಲವ್ವರ್ ಆಫ್ ಜಾನು’ ಚಿತ್ರದಲ್ಲಿ ಫಲ ಕೊಡುತ್ತದೆನ್ನುವ ನಿರೀಕ್ಷೆ ಅವರದು. ವಿಶಾಲ್ ಅವರಿಗೆ ಹೋಲಿಸಿದರೆ ಮಂಜುಳಾ ಅವರಿಗಿದು ಅಚ್ಚರಿಯ ರೀತಿಯಲ್ಲಿ ದೊರೆತಿರುವ ಅವಕಾಶ. ವಿಶಾಲ್ ಹಾಗೂ ಮಂಜುಳಾ ಕಿರುತೆರೆಯಲ್ಲಿ ಒಟ್ಟಿಗೆ ಕೆಲಸ ಮಾಡಿದವರು. ಆ ಸಂದರ್ಭದಲ್ಲಿ, ‘ನಾನು ಹೀರೊ ಆದರೆ ನನ್ನ ಚಿತ್ರಕ್ಕೆ ನೀವೇ ಹೀರೊಯಿನ್’ ಎಂದು ವಿಶಾಲ್ ಹೇಳಿದ್ದಾರೆ. ಆ ವಿನೋದದ ಮಾತು ಈಗ ನಿಜವಾಗಿದೆ. ಚೆನ್ನೈನ ಶ್ರೀನಾಥ್ ವಿಜಯ್ ಸಂಗೀತ ಚಿತ್ರಕ್ಕಿದೆ. ಚಿಕ್ಕಣ್ಣ, ಸುಚೇಂದ್ರ ಪ್ರಸಾದ್ ಹಾಗೂ ಕಡ್ಡಿಪುಡಿ ಚಂದ್ರು ತಾರಾಗಣದಲ್ಲಿರುವ ಪ್ರಮುಖರು.




# ತಾಯಿಯ ಮಡಿಲಲ್ಲಿ...

ಏನಾದರೂ ಮಾಡುತಿರು ತಮ್ಮ ಎನ್ನುವುದು ನಿರ್ದೇಶಕ ಶಶಾಂಕ್ ಅವರ ಪಾಲಿಸಿ. ಎಲ್ಲವೂ ಸರಿಹೋಗಿದ್ದರೆ ಪುನೀತ್ ರಾಜಕುಮಾರ್ ನಟನೆಯ ಸಿನಿಮಾದ ನಿರ್ದೇಶನದಲ್ಲಿ ಅವರು ಬಿಜಿಯಾಗಿರಬೇಕಿತ್ತು. ಸದ್ಯಕ್ಕೆ ಪುನೀತ್ ಸಿನಿಮಾ ಮುಂದೆ ಹೋಗಿರುವುದರಿಂದ ಶಶಾಂಕ್ ‘ತಾಯಿಗೆ ತಕ್ಕ ಮಗ’ ಚಿತ್ರದ ನಿರ್ದೇಶನವನ್ನು ಕೈಗೆತ್ತಿಕೊಂಡಿದ್ದಾರೆ.

‘ತಾಯಿಗೆ ತಕ್ಕ ಮಗ’ ಶಶಾಂಕ್ ನಿರ್ಮಿಸುತ್ತಿರುವ ಸಿನಿಮಾ. ಈ ಸಿನಿಮಾದ ನಿರ್ದೇಶಕರ ಜಾಗದಲ್ಲಿ ವೇದ್ ಗುರು ಹಾಗೂ ರಘು ಕೋವಿ ಅವರ ಹೆಸರುಗಳು ಕಾಣಿಸಿಕೊಂಡಿದ್ದವು. ಈಗ ಸ್ವತಃ ಶಶಾಂಕ್ ತಮ್ಮ ನಿರ್ಮಾಣದ ಚಿತ್ರವನ್ನು ಕೈಗೆತ್ತಿಕೊಂಡಿದ್ದಾರೆ. ಇದು ಶಶಾಂಕ್ ನಿರ್ಮಾಣದ ಚೊಚ್ಚಿಲ ಚಿತ್ರವೂ ಹೌದು.

ಶೀರ್ಷಿಕೆಗೆ ತಕ್ಕಂತೆ ತಾಯಿ–ಮಗನ ಅನುಬಂಧದ ಕಥೆ ಚಿತ್ರದಲ್ಲಿದೆ. ಅಜಯ್ ರಾವ್ ಚಿತ್ರದ ನಾಯಕ ನಟ. ಇವರಿಗೆ ಜೋಡಿಯಾಗಿ ಆಶಿಕಾ ರಂಗನಾಥ್ ನಟಿಸುತ್ತಿದ್ದಾರೆ. ಈ ಜೋಡಿಗೆ ಅಭಿನಯಕ್ಕೆ ಸಾಕಷ್ಟು ಅವಕಾಶವಿದೆಯಂತೆ. ಅಮ್ಮನ ಪಾತ್ರದಲ್ಲಿ ಸುಮಲತಾ ಅಂಬರೀಷ್ ನಟಿಸುತ್ತಿರುವುದು ಚಿತ್ರದ ವಿಶೇಷಗಳಲ್ಲೊಂದು. ಶೇಖರ್ ಚಂದ್ರು ಛಾಯಾಗ್ರಹಣ ಹಾಗೂ ಜೂಡಾ ಸ್ಯಾಂಡಿ ಸಂಗೀತ ಚಿತ್ರಕ್ಕಿದೆ.

■ ರಘು